## ಮಧ್ಯಕಾಲೀನ ಅರ್ಜಿ ಸಂಖ್ಯೆ: 6 ರ ಮೇಲಿನ ಆದೇಶ

ಒಂದನೇ ಪ್ರತಿವಾದಿಯು ಸಿವಿಲ್ ಪ್ರಕ್ರಿಯಾ ಸಂಹಿತೆ 151 ರ ಪ್ರಕಾರ ಈ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿ ಜೀವನಾಂಶವಾಗಿ ಮಾಸಿಕ ರೂ.10,000/- ಗಳಂತೆ ನೀಡಬೇಕಾಗಿ ವಾದಿಗಳಿಗೆ ಮತ್ತು ಮೂರನೇ ಪ್ರತಿವಾದಿಯರಿಗೆ ನಿರ್ದೇಶನ ನೀಡಬೇಕಾಗಿ ಕೋರಿಕೊಂಡಿರುತ್ತಾರೆ.

2. ಒಂದನೇ ಪ್ರತಿವಾದಿಯು ತನ್ನ ಪ್ರಮಾಣ ಪತ್ರದಲ್ಲಿ ತನ್ನ ಮಕ್ಕಳಾದ ನಂಜುಂಡಶೆಟ್ಟಿ ಮತ್ತು ಸಿದ್ಧರಾಜು ಭಾಗಾಂಶಕ್ಕಾಗಿ ದಾವೆ ಹೂಡಿದ್ದು, ತನಗೆ 80 ವರ್ಷಗಳಾಗಿದ್ದು, ವಯೋ ಸಹಜ ಖಾಯಿಲೆಗಳಿಂದ ಬಳಲುತ್ತಿದ್ದೇನೆ ಹಾಗೂ ನನ್ನ ಶಕ್ತಿ ಕುಂದುತ್ತಿದ್ದು, ಆರೋಗ್ಯ ಸಮಸ್ಯೆ ಎದುರಾಗಿದ್ದು, ನನ್ನ ಮಕ್ಕಳು ನನ್ನನ್ನು

ಮನೆಯಿಂದ ಹೊರಹಾಕಿರುತ್ತಾರೆ ಹಾಗೂ ಆಹಾರ ಮತ್ತು ಚಿಕಿತ್ಸೆಯನ್ನು ಒದಗಿಸಿರುವುದಿಲ್ಲ. ಕೆಲವು ಆಸ್ತಿಗಳು ನನ್ನ ಹೆಸರಿಗೆ ಖಾತೆಯಾಗಿದ್ದರೂ ಸಹಾ ವಾದಿಗಳೇ ವ್ಯವಸಾಯ ಮಾಡಿಕೊಂಡು ಲಾಭಾಂಶ ಅನುಭವಿಸುತ್ತಿದ್ದಾರೆ. ಆ ಕಾರಣದಿಂದ ನನ್ನ ದಿನನಿತ್ಯದ ಆಹಾರ ಹಾಗೂ ವೈದ್ಯಕೀಯ ಖರ್ಚುಗಳಿಗಾಗಿ ಮಾಸಿಕ ರೂ.10,000/- ದಂತೆ ವಾದಿಗಳು ನೀಡಬೇಕಾಗಿ ನಿರ್ದೇಶನ ನೀಡಿ ಎಂದು ಪ್ರಾರ್ಥಿಸಿರುತ್ತಾರೆ.

**3.** ಒಂದನೇ ಪ್ರತಿವಾದಿಯ ಅರ್ಜಿಗೆ ವಾದಿಯರು ತಕರಾರನ್ನು ಸಲ್ಲಿಸಿ ಪ್ರಸ್ತುತ ದಾವೆಯನ್ನು ದಾವಾ ಶೆಡ್ಯೂಲ್ ಸ್ವತ್ತುಗಳಲ್ಲಿನ ಭಾಗಾಂಶಕ್ಕಾಗಿ ದಾಖಲಿಸಿದ್ದು, ಪ್ರತಿವಾದಿಗಳು ವಾದಿಯನ್ನು ಪಾಟೀಸವಾಲು ಮಾಡಬೇಕಾಗಿರುತ್ತದೆ. ನ್ಯಾಯಾಲಯದಿಂದ ಸಾಕಷ್ಟು ಸಮಯ ಪಡೆದಿದ್ದರೂ ಕೂಡಾ ಪಾಟೀಸವಾಲನ್ನು ಮಾಡದೇ ಕಾಲ ವಿಳಂಬ ಮಾಡುವ ಉದ್ದೇಶದಿಂದ ಅರ್ಜಿಯನ್ನು ಸಲ್ಲಿಸಿರುತ್ತಾರೆ. ದಾವಾ ಸ್ವತ್ತುಗಳು ಪ್ರತಿವಾದಿಗಳ ಸ್ವಾಧೀನದಲ್ಲಿದ್ದು ವಾದಿಯು ಇಲ್ಲಿಯ ತನಕ ಯಾವುದೇ ಲಾಭಾಂಶವನ್ನು ಪಡೆದಿರುವುದಿಲ್ಲ. ವಾದಿ ಕೂಲಿ ಕೆಲಸದಿಂದ ಜೀವನ ನಿರ್ವಹಣೆ ಮಾಡುತ್ತಿದ್ದು, ದಾವಾ ಸ್ವತ್ತುಗಳೆಲ್ಲವು ಒಂದನೇ ಪ್ರತಿವಾದಿಯ ಹೆಸರಿನಲ್ಲಿದೆ ಹಾಗೂ ಐಟಂ ನಂಬರ್-1 ರ ಸ್ವತ್ತನ್ನು ನಾಲ್ಕನೇ ಪ್ರತಿವಾದಿಗೆ ಮಾರಾಟ ಮಾಡಿ ಲಾಭಾಂಶವನ್ನು ಕೂಡ ಒಂದನೇ ಪ್ರತಿವಾದಿಯೇ ಉಪಯೋಗಿಸಿಕೊಂಡಿರುತ್ತಾರೆ. ಅಲ್ಲದೇ ಒಂದನೇ ಪ್ರತಿವಾದಿಯು ವಾದಿಗಳ ತಾಯಿಯಾದ ಮಾದಮ್ಮರವರನ್ನು ಮನೆಯಿಂದ ಹೊರಗೆ ಹಾಕಿದ್ದು, ಆಕೆಯನ್ನು ಸಹ ನೋಡಿಕೊಳ್ಳುವ ಹೊಣೆಗಾರಿಕೆ ವಾದಿಯಾದ್ದಾಗಿರುತ್ತದೆ. ಅಲ್ಲದೇ ವಾದಿಯು ಮಧ್ಯಕಾಲೀನ ಲಾಭಾಂಶಗಳ ವಸೂಲಾತಿಗಾಗಿ ಅರ್ಜಿಯನ್ನು ಕೂಡ ಸಲ್ಲಿಸಿದ್ದು, ಬಾಕಿ ಇರುತ್ತದೆ. ಆ ಕಾರಣದಿಂದ ಒಂದನೇ ಪ್ರತಿವಾದಿಯ ಅರ್ಜಿಯನ್ನು ವಜಾ ಮಾಡಬೇಕಾಗಿ ಪ್ರಾರ್ಥಿಸಿಕೊಂಡಿರುತ್ತಾರೆ.

4. ವಾದವನ್ನು ಆಲಿಸಲಾಯಿತು.

5. ದಾವಾ ಪತ್ರ ಮತ್ತು ಪ್ರತಿವಾದಪತ್ರಗಳ ಅಂಶಗಳನ್ನು ಪರಿಶೀಲಿಸಿದಾಗ ವಾದಿಗಳು ತನ್ನ ತಂದೆ ಹಾಗೂ ಇತರರ ಮೇಲೆ ಭಾಗಾಂಶ ಕೋರಿ ದಾವಾ ದಾಖಲಿಸಿರುತ್ತಾರೆ. ಪ್ರತಿವಾದಿಗಳು ವಕೀಲರ ಮುಖಾಂತರ ಹಾಜರಾಗಿ ಪ್ರತಿವಾದ ಪತ್ರವನ್ನು ಸಲ್ಲಿಸಿ ದಾವೆಯ ಅಂಶಗಳನ್ನು ಅಲ್ಲಗಳೆದಿರುತ್ತಾರೆ.

6. ಈ ದಾವಾದಲ್ಲಿ ವಿವಾದಾಂಶಗಳು ರಚಿತವಾದ ನಂತರ ವಾದಿಯು ನ್ಯಾಯಾಲಯದ ಮುಂದೆ ಹಾಜರಾಗಿ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿ ತನ್ನ ಪರವಾಗಿ ನಿಶಾನೆ ಪಿ – 1 ರಿಂದ 17 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಆ ನಂತರದಲ್ಲಿ ವಾದಿಯು ನ್ಯಾಯಾಲಯದಲ್ಲಿ ಪಾಟೀಸವಾಲಿಗಾಗಿ ಮೂರು ಬಾರಿ ಹಾಜರಾಗಿದ್ದರೂ ಕೂಡಾ ಪ್ರತಿವಾದಿ ಪರ ವಕೀಲರು ಪಾಟೀಸವಾಲು ಮಾಡಲು ಸಮಯಾವಕಾಶ ಕೋರಿರುತ್ತಾರೆ. ಅನಂತರದಲ್ಲಿ ದಿನಾಂಕಃ 03.01.2022 ರಂದು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ವಾದಿಗಳ ಪ್ರಕಾರ ದಾವಾ ಸ್ವತ್ತು ಒಂದನೇ ಪ್ರತಿವಾದಿಯ ಹೆಸರಿನಲ್ಲಿದ್ದು, ವ್ಯವಸಾಯ ಮಾಡಿಕೊಂಡಿರುತ್ತಾರೆ ಹಾಗೂ ವ್ಯವಸಾಯದ ಲಾಭಾಂಶವನ್ನು ಅವರೇ ಪಡೆದುಕೊಳ್ಳುತ್ತಿದ್ದಾರೆ, ಅಲ್ಲದೇ ದಾವಾ ಸ್ವತ್ತಿನ ಐಟಂ ನಂಬರ್ – 1 ಕೂಡ ನಾಲ್ಕನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ್ದಾರೆಂದು ನುಡಿದು ಕ್ರಯಪತ್ರವನ್ನು ಹಾಜರು ಪಡಿಸಿರುತ್ತಾರೆ. ಕಡತದಲ್ಲಿರುವ ಆದೇಶಗಳನ್ನು ಪರಿಶೀಲಿಸಿದಾಗ ವಾದಿ ಸಲ್ಲಿಸಿದ ಮಧ್ಯಕಾಲೀನ ಅರ್ಜಿ ಸಂಖ್ಯೆ – 3, ದಿನಾಂಕಃ 08.12.2020 ರಂದು ವಜಾಗೊಂಡಿರುವುದು ಕಂಡುಬರುತ್ತದೆ. ಈಗ ಪ್ರಸ್ತುತ ದಾವೆಯು ವಾದಿಯರ ಪಾಟೀಸವಾಲಿಗಾಗಿ ಮುಂದೂಡಲಾಗಿರುತ್ತದೆ, ವಾದಿಗಳ ಪ್ರಕಾರ ದಾವಾ ಸ್ವತ್ತಿನ ಲಾಭಾಂಶವನ್ನು

ಒಂದನೇ ಪ್ರತಿವಾದಿಯು ಪಡೆಯುತ್ತಿದ್ದಾರೆ ಎಂದು ಆರೋಪ ಮಾಡಿದ್ದು, ಅದಕ್ಕೆ ಪ್ರತಿಯಾಗಿ ಒಂದನೇ ಪ್ರತಿವಾದಿಯು ತಾನು ವಯೋವೃದ್ಧನಾಗಿದ್ದು, ಮಕ್ಕಳು ಮನೆಯಿಂದ ಹೊರಗೆ ಹಾಕಿದ್ದಾರೆಂದು ಜೀವನಾಂಶವನ್ನು ಕೇಳಿರುತ್ತಾರೆ.

**7.** ವಾದಿಯರು ಹಾಜರು ಪಡಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ದಾವಾ ಸ್ವತ್ತುಗಳು ಒಂದನೇ ಪ್ರತಿವಾದಿಯ ಹೆಸರಿನಲ್ಲಿದ್ದು, ಐಟಂ ನಂಬರ್ –1 ಸ್ವತ್ತನ್ನು ಕೂಡಾ ಒಂದನೇ ಪ್ರತಿವಾದಿ ನಾಲ್ಕನೇ ಪ್ರತಿವಾದಿಗೆ ಮಾರಾಟ ಮಾಡಿರುವುದು ಕಂಡು ಬರುತ್ತದೆ. ಆ ಕಾರಣಕ್ಕಾಗಿ ದಾವಾ ಸ್ವತ್ತುಗಳಲ್ಲಿ ಈಗ ಯಾರು ಸ್ವಾಧೀನದಲ್ಲಿದ್ದು ಲಾಭಾಂಶ ಪಡೆಯುತ್ತಿದ್ದಾರೆಂದು ಸಾಕ್ಷಿ ವಿಚಾರಣೆ ಆಗದೇ ತೀರ್ಮಾನಿಸಲು ಸಾಧ್ಯವಿಲ್ಲ. ಆ ಕಾರಣಕ್ಕಾಗಿ ಈ ಹಂತದಲ್ಲಿ ಒಂದನೇ ಪ್ರತಿವಾದಿಯು ಸಲ್ಲಿಸಿದ ಅರ್ಜಿಯನ್ನು ಪರಿಗಣಿಸಲು ಸೂಕ್ತ ಕಾರಣಗಳು ಇಲ್ಲ. ಆ ಕಾರಣದಿಂದಾಗಿ ಒಂದನೇ ಪ್ರತಿವಾದಿ ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಬೇಕಾಗಿರುತ್ತದೆ.

**8.** ಈ ಮೇಲಿನ ಎಲ್ಲ ಕಾರಣಗಳಿಂದ ಈ ಕೆಳಕಂಡಂತೆ ಆದೇಶ ಮಾಡಲಾಗಿರುತ್ತದೆ.

## ಆದೇಶ

ಒಂದನೇ ಪ್ರತಿವಾದಿಯು ಸಿವಿಲ್ ಪ್ರಕ್ರಿಯಾ ಸಂಹಿತೆ 151 ರಡಿಯಲ್ಲಿ ಸಲ್ಲಿಸಿದ ಮಧ್ಯಕಾಲೀನ ಅರ್ಜಿ ಸಂಖ್ಯೆ: 6 ವಜಾಗೊಳಿಸಲಾಗಿದೆ.

ಖರ್ಚಿಗೆ ಯಾವುದೇ ಆದೇಶ ಇಲ್ಲ.

ಉಭಯುತ ಪಕ್ಷಕಾರರಿಗೆ ದಾವೆಯನ್ನು ತ್ವರಿತವಾಗಿ ವಿಲೇ ಮಾಡಲು ಸಹಕರಿಸಬೇಕಾಗಿ ನಿರ್ದೇಶಿಸಲಾಗಿದೆ.

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ .,
ಚಾಮರಾಜನಗರ.